


ಊರೊಳಗೆ ಹತ್ತೀಜೀನು ನೆಡಸುವವ. ಪಡಿಯಾ ಊರುಸೇರಿದ ಮೇಲೆ ಲೆಕ್ಕ ಬರಿಯೋ ಕೆಲಸಕ್ಕೆ ಇಲ್ಲಿಯೇ ಸೇರಿಕೊಂಡಿದ್ದ. ಏಟಾದ್ರೂ ಡಿಗ್ರಿಕಟ್ಟೇ ಹತ್ತಿದ ಹುಡುಗ. ಆಸರಕ್ಕ ಆಕ್ಕಾನಂತ ಉರಿಗೌಡನ ಯೋಚನೆ. ಅಣ್ಣ-ತಮ್ಮರಿಬ್ರೂ ಬ್ಯಾರಾದ್ರೂ ಹರೀತಿದ್ದ ರಕ್ತ ಒಂದಾ. ಅಣ್ಣನಿಗಾದ ಅವಮಾನದ ಕುದಿ ಉರಿಗೌಡನೊಳಗೂ ಕುದೀತಿತ್ತು. ಸಮಯ ಸಾಧಿಸಲು ಶತ್ರುವನ್ನು ಪಕ್ಕದಲ್ಲಿಯೇ ಇರಿಸಿಕೊಂಡ ಜಾಣನಾತ. ರುದ್ರಗೌಡನಿಗೆ ಪಡಿಯಾ ತಮ್ಮನ ಜಿನ್ನಿನ್ಯಾಗ ಕೆಲಸ ಮಾಡೋ ಸುದ್ದಿ ತಿಳಿದರೂ ಸುಮ್ಮನಿದ್ದ. ಕೆಲಸದ ಪ್ರಾರಂಭದ ದಿನಗಳಲ್ಲಿ ಪಡಿಯಾ, ರುದ್ರೇಗೌಡನ ಕಂಡಾಗೊಮ್ಮೆ ತಲೆತಗ್ಗಿಸಿಕೊಂಡು ನಡೆಯಹತ್ತಿದ. ಆದರೆ ಉರಿಗೌಡನು ರಾತ್ರಿ ಹೊತ್ತಿಗೆ ಕಂಠಪೂರ್ತಿ ಕುಡಿಸುತ್ತಿದ್ದ ಸೆರೆ ಅವನಿಗೆ ಎಲ್ಲವನ್ನು ಮರೆಸಿಬಿಟ್ಟಿತ್ತು.

ಜಿಂದೇಸಾಬನ ಅಂಗಡ್ಯಾಗ ಪಡಿಯಾ ಆಡಿದ ಮಾತುಗಳು ಉರಿಗೌಡನ ಕಿವಿಗೆ ಬೀಳುವುದೂ ತಡವಾಗಲಿಲ್ಲ. ಕೂಡಿಟ್ಟ ಆಕ್ರೋಶವೆಲ್ಲ ಹೊರಚೆಲ್ಲಿತು. ಹೊಟ್ಯಾಗಿನ ಸಿಟ್ಟು ರಟ್ಯಾಗಿಲ್ದೇ ಅಣ್ಣನೊಂದಿಗೆ ಒಡಲಕುದಿ ಹಂಚಿಕೊಂಡ. ‘ಮೂಕಬಸವಣ್ಣನ ಶೆಗಣಿ ಇಲ್ಲಾಂದ್ರೂ ಹೇಲ್ ತಿಂದು ಬದುಕೋದಾಗುತ್ತ ಈ ಸೂ..ಮಕ್ಳು, ನೆಲ ಅವ್ವಾದ್ರ ಬಸವಣ್ಣ ಅಪ್ಪ ಇದ್ದಂಗ, ಕೊಳ್ ಹರ್ಕೊಲಾರ್ದಂಗ ನಗಾ ಹೊತ್ ನೆಲ ಹದ ಮಾಡೋ ದೇವ್ರದು. ನಮ್ದಾ ತಿಂಡಿ ಹೆಚ್ಚಾಗಿ ಬಾರುಕೋಲು ಬೀಸಿದ್ರೂ ನಾಕ್ ಹೆಜ್ಜಿ ಜಾಸ್ತಿನೋ ಹಾಕೋ ಬಸವಣ್ಣನ ಮುಂದ ಕಂಡಕಂಡಾರಿಗೆ ಬಡ್ಕೊಂಡು ಕಪ್ಪುಕಡಿ ಕೇಳೋ ಅಕಿದ್ಯೆನತಿ, ಊರು-ಊರನ ದೇವ್ರು-ಕುಲ ಎಲ್ಲಾನೂ ಹಾಳ್ಮಾಡಾಕ ನಿಂತ ಈ ರಂಡಿಮುಂಡಿ ಮಗಗ ಏನರ ಒಂದು ಗತಿ ಕಾಣ್ಸಾಕಬೇಕು’ ಎಂದು ಬೊಬ್ಬಿರಿದ. ಅಣ್ಣನೂ ಗೋಣಾಡಿಸಿದ.

ಹೊತ್ತು ಮುಳುಗುತ್ಲೇ ಹತ್ತೀಜೀನಿನ ಮುಂದಿನ ಬಯಲಾಗ ಸಾರಾಯಿ ಸಮೇತ ಕುಂತ ಉರಿಗೌಡ ಮತ್ತು ಪಡಿಯಾನಿಗೆ ದೂರದಿಂದಲೇ ರುದ್ರಗೌಡ ಕಾಣಿಸಿದ. ದೊಡ್ ಸಾವ್ಕಾರ್ರು ಬಂದ್ರಂತ ತುದಿಗುಂಡಿ ಮ್ಯಾಗ ಎದ್ದು ಕೂತು ಪಡಿಯಾ ಗೌರವವೂ ಸೂಚಿಸಿದ. ಇಂತಹ ಅನೇಕ ಭೇಟಿಗಳು ಅವರಿಬ್ಬರ ನಡುವೆ ನಡೆದರೂ ಒಳಗುದಿ ಹೊರಬಂದಿರಲಿಲ್ಲ. ಪಡಿಯಾನ ನೋಡಿದಾಗೊಮ್ಮೆ ರುದ್ರಗೌಡನ ಎದಿ ನಡುಗತ್ತಿತ್ತು. ಮೂವರ ಪಾನಗೋಷ್ಠಿ ಮುಂದುವರೆಯಿತು. ಪ್ರತಿದಿನದಂತೆ ಕಂಠಪೂರ್ತಿ ಕುಡಿದ ಪಡಿಯಾ ನಿಶೆ ನೆತ್ತಿಗೇರಿಸಿಕೊಂಡು ಕೂತಲ್ಲಿಯೇ ಅರೆಪ್ರಜ್ಞೆಗೆ ಜಾರಿ ಉರುಳಿಕೊಂಡ. ದಿನದ ಸಾಮಾನ್ಯ ಸಂಗತಿಯದು. ಆದರೆ ಮುಂದಿನ ಆಗುಹೋಗುಗಳು ಅಂದುಕೊಂಡಂತಿರಲಿಲ್ಲ. ಯೋಜಿಸಿದಂತೆಯೇ ಪಡಿಯಾನ ಅನಾಮತ್ತಾಗಿ ಎತ್ತಿ ಹತ್ತಿ ಅಂಡಿಗೆಯೊಂದರ ಮೇಲೆ ಎಸೆದ ಅಣ್ತಮ್ಮಂದಿರ ಮುಂದಿನ ಯೋಜನೆಗಳು ಜೀವಘಾತುಕಗಳಾಗಿದ್ದವು. ಬೆಂಕಿಕಟ್ಟಿ ಗೀರಿದ ರುದ್ರಗೌಡ ಉರಿಗೌಡನ ತುಟಿಯಲ್ಲಿನ ಸಿಗರೇಟು ಹೊತ್ತಿಸಿ ಕಡ್ಡಿಯನ್ನು ಅದೇ ಹತ್ತಿ ಅಂಡಿಗೆಯತ್ತ ಎಸೆದ ಬೆಂಕಿ ಬುಗುಬುಗು ಪಸರಿಸಿತು. ಬದುಕುವ ಯಾವ ಅವಕಾಶಗಳೂ ಪಡಿಯಾನಿಗೆ ಉಳಿಯಲೇ ಇಲ್ಲ.

ಅಣ್ಣತಮ್ಮರಿಬ್ರೂ ಗ್ವಾವಿನಜೋಳದ ಪಡದಾಗಿಳಿದು ದೂರನಡೆದು ಸಾಪನ ಜಗಾ ನೋಡಿ ಚರಿಗಿ ಮುಂದಿಟ್ಟು ಲಪಾಟಿ ಮ್ಯಾಗೆತ್ತಿ ಕುಂಡಿ ಕೆಳಗಮಾಡಿ ಕೂತು ಸಿಗರೇಟಚ್ಚಿದ್ರು. ತಿನಕ್ಯಾಡ್ತಾ ತಿನಕ್ಯಾಡ್ತಾ ‘ಬ್ಯಾಡಾಗಿದ್ದೂ ಹಿಂಗಾ ಹೊರಗಹಾಕ್ತಿರ್ಬೇಕು ದೇಹದಾಗಾತೂ ಲೋಕದಾಗಾತೂ’ ಎಂದ ಉರಿಗೌಡ. ‘ಹೋದ್ರ ಲಕ್ಷ ರೂಪಾಯಿ ಇದ್ರ ಮರ್ಯಾದೆ’ ಎಂದು ರುದ್ರೇಗೌಡ ಮಾತುಗೂಡಿಸಿದ. ಬೆಂಕಿಯ ಕೆನ್ನಾಲಿಗೆ ಆಕಾಶ ತಲುಪಿತ್ತು. ●